ಹತ್ತಿರ ಕರೆದುಕೊಂಡು ಹೋಗುತ್ತಿದ್ದನೇನೋ. ಪರಿಸ್ಥಿತಿ ಕೈಮೀರಿ ಹೋಗುತ್ತಿರಲಿಲ್ಲವೇನೋ. ಮಡದಿಯ ಈ ಸಾವಿಗೆ ತಾನೇ ಪರೋಕ್ಷವಾಗಿ ಕಾರಣನಾದೆನೇನೋ ಎನ್ನುವ ಪಾಪಪ್ರಜ್ಞೆಯೊಂದಿಗೆ ಮಗಳ ಕಣ್ಣಲ್ಲಿ ಖಳನಾಯಕನಂತೆ ಕಾಣಿಸುತ್ತಿರಬಹುದೆನ್ನುವ ಕೊರಗು. ಮತ್ತೊಮ್ಮೆ ಬಾಯ್ಬಿಟ್ಟು ಹೇಳದೆಯೇ, 'ಇದೆಲ್ಲಾ ಬೇಕಿತ್ತಾ ಅಪ್ಪಾ?' ಮಗಳು ಕೇಳುತ್ತಿರುವ ಹಳವಂಡ. ಜನಾರ್ದನ ಇದ್ದೂ ಸತ್ತಂತವನಾಗಿದ್ದ.

★★★

ನೇತ್ರಾ ಹರಕೆ ಹೇಳಿಕೊಂಡವಳಂತೆ ವರ್ಷಕ್ಕೊಮ್ಮೆ ಬರುತ್ತಿದ್ದಳು. ತಿಂಗಳೊಪ್ಪತ್ತು ಇದ್ದು ಹೋಗುತ್ತಿದ್ದಳು. ಮೊಮ್ಮಗನೊಡನೆ ಅವಳು ಬಂದಾಗ ಮನೆಯಲ್ಲಿ ಒಂದಿಷ್ಟು ಲವಲವಿಕೆಯ ವಾತಾವರಣ. ಮಾತಿನ ಕಲರವ. ಜನಾರ್ದನ ಮೊಮ್ಮಗನನ್ನು ಎತ್ತಿಕೊಂಡು ತೋಟ, ಗದ್ದೆ ಸುತ್ತಾಡಿಸುತ್ತಿದ್ದ. ಅವನ ಮುಂಗುರುಳು ಒಪ್ಪ ಮಾಡಿ ಸುಖಿಸುತ್ತಿದ್ದ. ತನ್ನ ಮಗ ಕೂಡಾ ಹೀಗಿದ್ದಿದ್ದರೆ ತನ್ನ ಸುಖಕ್ಕೆ ಪಾರವಿರುತ್ತಿತ್ತೇ? ವಿಧಿ ಯಾಕಿಷ್ಟು ನಿಷ್ಕರುಣಿ? ನನಗೇಕೆ ಈ ಶಿಕ್ಷೆ? ನನಗೆ ಮಾತ್ರಾ ಯಾಕೆ ಈ ಶಿಕ್ಷೆ? ಈ ಪ್ರಶ್ನೆಯನ್ನು ಅದೆಷ್ಟೊಂದು ಜನ ತಮ್ಮ ಮೇಲೆ ಆರೋಪಿಸಿಕೊಂಡು ಅಗ್ನಿಕುಂಡದಲ್ಲಿ ಬೆಂದು ಹೋಗಿದ್ದಾರೋ? ಅವರವರ ಕಷ್ಟ ಅವರವರಿಗೆ ಹಿರಿದು. ವಯಸ್ಸಾದ ಪದ್ದಯ್ಯ ಈ ಮನೆಯ ಕಾಯಂ ಅಡುಗೆಭಟ್ಟರಾಗಿ ತಿಂಗಳ ಸಂಬಳಕ್ಕೆ ಭಾಜನರಾಗಿದ್ದರು. ಮೀನಾಕ್ಷಿ ಇರುವವರೆಗೆ ಅವಳ ಬಾಣಂತನದಿಂದ ಮೊದಲ್ಗೊಂಡು ಮನೆಯ ಸಕಲ ಕೆಲಸಕಾರ್ಯಗಳಿಗೂ ಹೆಗಲು ಕೊಟ್ಟಿದ್ದು ಮಾಲಕ್ಷ್ಮಿ. ಕ್ಷಣಕ್ಕೊಮ್ಮೆ ಎನ್ನುವಂತೆ ಬದಲಾಗುವ ಮೀನಾಕ್ಷಿಯ ಭಾವಾತಿರೇಕಗಳಿಗೆ ಹೊಂದಿಕೊಂಡು ಈ ಮನೆಗೆ ಕಚ್ಚಿಕೊಂಡಿದ್ದಳು ಮಾಲಕ್ಷ್ಮಿ. ಮೀನಾಕ್ಷಿ ಬೈದರೆ ಅವಳು ವಿಪರೀತಾರ್ಥ ಕಲ್ಪಿಸುತ್ತಿರಲಿಲ್ಲ. 'ಪಾಪ ಮೀನಾಕ್ಷಮ್ಮ, ಹೊಟ್ಟೆಸಂಕಟ ಹೀಗೆ ಮಾತಾಡಿಸುತ್ತೇ ವಿನಾ ಇಲ್ದಿದ್ರೆ ಚಿನ್ನದಂತಾ ಗುಣ. ನಾನು ನೋಡಿಲ್ದೇ ಇರೋವ್ರಾ?' ಎನ್ನುವಷ್ಟು ವಿಶಾಲದೃಷ್ಟಿ ಮಾಲಕ್ಷ್ಮಿಗಿತ್ತು. ಜನಾರ್ದನ ಕೂಡಾ ಇದನ್ನೇ ಹೇಳಿದ್ದ,

"ಅವಳು ಏನಾದ್ರೂ ಅಂದುಗಿಂದ್ರೆ ತಲೆಗೆ ಹಚ್ಕೋಬೇಡ. ಪರಿಸ್ಥಿತಿ ಗೊತ್ತುಂಟಲ್ಲಾ ನಿಂಗೆ?"

ಅವಳೊಬ್ಬಳಿದ್ದಳೆಂದು ಈ ಮನೆಯ ಪಥ ಸಲೀಸಾಗಿ ನಡೆಯುತ್ತಿತ್ತು ಅನ್ನುವುದರಲ್ಲಿ ಉತ್ಪ್ರೇಕ್ಷೆ ಇರಲಿಲ್ಲ. ನಾಮಕರಣವನ್ನೇ ಕಾಣದೆ ಹುಟ್ಟಿದಾಗಿನಿಂದ 'ಪಾಪಣ್ಣ' ಆಗಿದ್ದ ಬುದ್ಧಿಮಾಂದ್ಯ ಮಗುವೆಂದರೆ ಮಾಲಕ್ಷ್ಮಿಗೆ ವಿಪರೀತದ ಕನಿಕರ. 'ದೇವರ ಸೇವೆ' ಎನ್ನುವಷ್ಟು ನಿಷ್ಠೆಯಿಂದ ಹೊತ್ತುಹೊತ್ತಿಗೆ ಆ ಮಗುವಿನ ಹೊಟ್ಟೆಬಟ್ಟೆ ನೋಡಿಕೊಳ್ಳುತ್ತಿದ್ದಳು ಮಾಲಕ್ಷ್ಮಿ. ನಾಲ್ಕು ವರ್ಷ ವಯಸ್ಸಾದರೂ ಎದ್ದು ನಿಲ್ಲದೆ, ಓಡಾಡದೆ, ಕೂರಿಸಿದಲ್ಲಿ ಕೂತಿರುತ್ತಿದ್ದರೂ, ಮಾಲಕ್ಷ್ಮಿಯ ಮುಖ ಕಂಡರೆ ಆ ಮಗುವಿನ ಕಣ್ಣುಗಳಲ್ಲಿ ಬೆಳಕೊಂದು ಹೊಳೆದಂತಾಗುವುದು ಸೂಕ್ಷ್ಮ ನಿರೀಕ್ಷಣೆಯವರಿಗೆ ಗೊತ್ತಾಗಿ ಬಿಡುತ್ತಿತ್ತು. ಅವಳ ಈ ನಿಷ್ಕಲ್ಮಷ ಪ್ರೀತಿ ಮಗಳ ಕಣ್ಣಲ್ಲಿ ಒತ್ತುತ್ತಿದೆಯೆಂದು ಜನಾರ್ದನ ಗೊತ್ತು ಮಾಡಿಕೊಂಡಿದ್ದ. ಯಾವುದೋ ಹೆಂಗಸು ತಮ್ಮ ಮನೆಯಲ್ಲಿ ಓಡಾಡಿಕೊಂಡು ಗೃಹಕೃತ್ಯದ ಹೊಣೆ ಹೊತ್ತಿರುವುದು ಅವಳಿಗೆ ಕಿರಿಕಿರಿ. ನೇತ್ರಾ ಮಾಲಕ್ಷ್ಮಿಯೊಡನೆ ಒರಟಾಗಿ ನಡೆದುಕೊಂಡರೆ ಪುಕ್ಕಲು ಹತ್ತುತ್ತಿದ್ದದ್ದು ಜನಾರ್ದನನಿಗೆ. ಇವಳಿಗೇನಂತೆ, ನಾಲ್ಕು ದಿನ ಬಂದು ದರ್ಬಾರು ಮಾಡಿ ಹೊರಟು ಹೋಗುತ್ತಾಳೆ. ಮನೆಯ ಸಂಪೂರ್ಣ ಹೊಣೆ ಹೊತ್ತು ನಿಭಾಯಿಸುವ ಆಸಕ್ತಿ, ಶಕ್ತಿ ಎರಡನ್ನೂ ಕಳೆದುಕೊಂಡಿರುವವನ ಎದೆಬಡಿತ ಮಗಳ ಅತಿರೇಕದ ಯಜಮಾನಿಕೆಯಿಂದ ಏರಿಬಿಡುತ್ತಿತ್ತು. ಅವಳು ಬರುವುದಕ್ಕಿಂತಾ ಬರದೇ ಇರುವುದೇ ವಾಸಿ ಅನಿಸತೊಡಗಿ ತನ್ನ ಮನೋಸ್ಥಿತಿಯ ಕುರಿತು ಅವನಿಗೇ ಕಳವಳ. ತನ್ನ